ಗೊಂದಲ

ಶ್ರೀ ವಾಟಾಳ್ ನಾಗರಾಜ್:– ಈ ಕಡೆ ಎಲ್ಲರೂ ಮೌನವಾಗಿ ಕುಳಿತಿದ್ದಾರೆ. ತಾವು ಅಧ್ಯಕ್ಷರೂ ಮೌನವಾಗಿ ಕುಳಿತಿರತಕ್ಕದ್ದು ಒಳ್ಳೆಯ ನೀತಿಯಲ್ಲ. ಇದು ನಗುವಂತಹ ವಿಷಯವಲ್ಲ. ತಾವು ಸದನಕ್ಕೆ ಹೇಳಿ. ಯಾವ ಹೆಸರಿನಲ್ಲಿ ಬೇಕಾದರೂ ಪ್ರಮಾಣ ವಚನ ತೆಗೆದುಕೊಳ್ಳಬಹುದಾ? ಯಾವ ಭಾಷೆಯಲ್ಲಿ ಬೇಕಾದರೂ ಮಾತನಾಡಬಹುದಾ? ಈ ಬಗ್ಗೆ ತಾವು ಸದನಕ್ಕೆ ತಿಳುವಳಿಕೆ ಕೊಡಿ. ಇದಕ್ಕೆ ಅರ್ಥ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಛೇರ್ಮನ್ ಅವರೆ, ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ವಾಟಾಳ್ ನಾಗರಾಜ್ ಅವರು ಪ್ರಸ್ತಾಪ ಮಾಡಿರುವಂಥದ್ದು ಸರಿಯಾದಂತಹ ವಿಚಾರವೇ ಆಗಿದೆ. ಸಂವಿಧಾನದ 188ನೇ ವಿಧಿಯ ಪ್ರಕಾರ ಅದೊಂದು ನಿರ್ದಿಷ್ಟಪಡಿಸಿದ ಭಗವಂತನ ಹೆಸರಿನಲ್ಲಿ ಅಥವಾ ಸತ್ಯದ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡತಕ್ಕದ್ದು ಎಂದಿದೆ. ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಹಾಗೂ ನಿಯಮಾವಳಿಗಳು, ನಿಯಮ 5ರ ಕೆಳಗಡೆ ಕೂಡ, ಸಂವಿಧಾನ 188ನೇ ಅನುಚ್ಛೇದದ ಮೇರೆಗೆ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನವನ್ನು ಈಗಾಗಲೇ ತೆಗೆದುಕೊಂಡಿರುವಂತಹ ಸದಸ್ಯರು ಈ ಸಂಬಂಧದಲ್ಲಿ ಕಾರ್ಯದರ್ಶಿಯವರಿಗೆ ಪೂರ್ವಭಾವಿಯಾಗಿ ಲಿಖಿತ ಮೂಲಕ ಸೂಚನೆ ಕೊಟ್ಟ ತರುವಾಯ ಸದನದ ಅಧಿವೇಶನವು ಪ್ರಾರಂಭವಾದಾಗ, ಸದನದ ಅಧಿವೇಶನವು ನಡೆಯುವ ಯಾವುದೇ ದಿನದಲ್ಲಿ ಅಧ್ಯಕ್ಷರು ನಿರ್ದೇಶಿಸಬಹುದಾದಂತಹ ಇತರೆ ಯಾವುದೇ ಕಾಲದಲ್ಲಿ ಪ್ರಮಾಣ ವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ತೆಗೆದುಕೊಂಡು ಅದಕ್ಕೆ ತಮ್ಮ ರುಜುವನ್ನು ಹಾಕಬಹುದು ಎಂದು ಇದೆ. ಅದಕ್ಕೆ ಒಂದು ಪ್ರೊಫಾರ್ಮಾ ಇದೆ. ನಿಯಮ 188ರ ಕೆಳಗಡೆ ತಯಾರಾಗಿ ಇರತಕ್ಕಂಥದ್ದು. ಈಗ ಮಾನ್ಯ ಸದಸ್ಯರುಗಳು ಹೊಸಬರಾಗಿರುವುದರಿಂದ ತಾವು ಅಷ್ಟು ತೀಕ್ಷ್ಣವಾಗಿ ಪ್ರಸ್ತಾಪ ಮಾಡತಕ್ಕದ್ದು ಅಲ್ಲ. ಅದನ್ನು ಸರಿಪಡಿಸಿಕೊಳ್ಳತಕ್ಕಂಥ, ಅಂತರ್ಗತವಾದಂತಹ ಅಧಿಕಾರ ಮಾನ್ಯ ಸಭಾಪತಿಗಳಿಗೆ ಇದೆ.

ಛೇರ್ಮನ್:– ಬಹುಶಃ ಆಗಲೇ ರೂಲಿಂಗ್ ಕೊಟ್ಟಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್:– ಆದರೆ ಮುಂದೆ ಸೂಚನೆ ಕೊಡುವಂತಹದು ಕೂಡ ಇದೆ. ಇದಾದ ನಂತರ ಸಂಸದೀಯ ಇಲಾಖೆಯವರು ಮತ್ತು ನಮ್ಮ ವಿಧಾನ ಮಂಡಲದ ಇಲಾಖೆಯವರು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮೂರು ದಿವಸದ ಅಥವಾ ಎಂಟು ದಿವಸದ ತರಬೇತಿಯನ್ನೂ ಕೂಡ ಕೊಡುತ್ತಾರೆ. ಎಲ್ಲರೂ ಕೂಡ ಅಲ್ಲಿ ಇರುವಂತಹ, ಏನು ವಿಧಿವತ್ತಾಗಿ ಬರೆದಿರುವಂತಹದು ಇದೆ, ಅದಕ್ಕೆ ಅನುಗುಣವಾಗಿಯೇ ಪ್ರತಿಜ್ಞೇಯನ್ನು ಸ್ವೀಕರಿಸಬೇಕು ಎಂದು ತಮ್ಮ ಅಪ್ಪಣೆ ಪಡೆದು ವಿನಂತಿ ಮಾಡುತ್ತಿದ್ದೇನೆ.

10. ಪ್ರಮಾಣ ವಚನ ಸ್ವೀಕಾರ (ಮುಂದು)

ಶ್ರೀ ಮರಿಹಾಳ್ ಸುರೇಶ್ ಶಿವರುದ್ರಪ್ಪ	ಕಿತ್ತೂರ್	ಕನ್ನಡ
ಶ್ರೀ ಬಿ.ಆರ್. ಪಾಟೀಲ್	ಆಳಂದ	ಕನ್ನಡ
ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ	ಗುಳೇದಗುಡ್ಡ	ಕನ್ನಡ

ಶ್ರೀ ಪಿ.ಸಿ. ಮೋಹನ್	ಚಿಕ್ಕಪೇಟೆ	ಕನ್ನಡ
ಶ್ರೀ ಮುನಿಯಪ್ಪ ಮುದ್ದಪ್ಪ ಬಿ.	ಕಲ್ಮಲ	ಕನ್ನಡ

11. ಪ್ರಮಾಣ ವಚನ ಸ್ವೀಕಾರದ ಬಗ್ಗೆ ಆಕ್ಷೇಪಣೆ (ತೀರ್ಪನ್ನು ಕಾಯ್ದಿರಿಸಲಾಗಿದೆ)

Sri M.P. Prakash:- Sir, with the permission of the Chair for the benefit of our Members ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದಂತೆ ರಾಜ್ಯಾಂಗದ ವಿಧಿ ವಿಧಾನದ ಪ್ರಕಾರವೂ ಕೂಡ 188ನೇ ಕಲಂ ಈ ತರಹ ಹೇಳುತ್ತದೆ.

"Every Member of the Legislative Assembly or the Legislative Council of the State shall before taking his seat make and subscribe before the Governor or some person appointed in this behalf by him an oath or affirmation according to the form set out for the purpose in the III Schedeule".

ಆ ಥರ್ಡ್ ಶೆಡ್ಯೂಲ್ ಪ್ರಕಾರ ಇಲ್ಲಿ ಪ್ರಿಸ್ಕ್ರೈಬ್ ಆಗಿರುವುದರಿಂದ ಅದರಲ್ಲಿ ಏನೂ ವ್ಯತ್ಯಾಸ ಮಾಡದಂತೆ ತೆಗೆದುಕೊಳ್ಳಬೇಕಾಗುತ್ತದೆ.

ಛೇರ್ಮನ್:– ಕನ್ನಡದಲ್ಲಿ ಇದು ನಮ್ಮ ನಿಯಮಾವಳಿಯ ಪೇಜ್ ನಂಬರ್ 4ರಲ್ಲಿ ಇದೆ ನೋಡಿ.

ಶ್ರೀ ಎಂ.ಪಿ. ಪ್ರಕಾಶ್:– ಬೇರೆ ಮಾನ್ಯ ಸದಸ್ಯರ ಅವಗಾಹನೆಗಾಗಿ ತರುತ್ತಿದ್ದೇನೆ. ಬೇರೆ ತರಹ ಮಾಡಿದ್ದರೆ ಇದು ಅಸಿಂಧು ಆಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:– ಯಾವ ಹೆಸರಿನಲ್ಲಿ ತೆಗೆದುಕೊಂಡರೂ ಸಹ ನಿಯಮಾವಳಿಯಲ್ಲಿ ಏನು ಹೇಳಿದೆ. ಅದೇ ಪ್ರಕಾರ ನಡೆಯಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್:– ಆದು ಬೇರೆ ನಡೆಯುವ ವಿಚಾರ ಬೇರೆ, ಕಾನೂನು ಬೇರೆ.

(ಗೊಂದಲ)

Sri K.R. Ramesh Kumar:- Form is not important. Content is important.

Sri M.P. Prakash:- No doubt content is important, but we are running the entire assembly as per the procedures that we have laid down.

Sri K.R. Ramesh Kumar:- Form is only to guide. Constitution is binding.

Sri M.P. Prakash:- It is binding. ದಯವಿಟ್ಟು ಕೇಳಿ. ತಾವೂ ಕೂಡ ಸಭಾಧ್ಯಕ್ಷರಾಗಿ ಹಿರಿಯ ಸದಸ್ಯರಾಗಿ ಕೆಲಸ ಮಾಡಿದ್ದೀರಿ. ನಿಯಮಾವಳಿಗಳ ಪ್ರಕಾರ ನಮ್ಮ ನಡವಳಿಕೆಗಳು ಇರಬೇಕು. ನಾವು ಅಂತರ್ಗತವಾಗಿ ಅಷಾಢಭೂತಿಗಳಾಗಿದ್ದರೆ ಅದು ಏನೂ ಪ್ರಶ್ನೆ ಇಲ್ಲ. ಆದರೆ ಇಲ್ಲಿ ನಿಯಮಾವಳಿಗಳ ಪ್ರಕಾರ ನಡೆಯಬೇಕಾಗಿರುವುದರಿಂದ ಯಾವುದು